

ಹಿಮಾಲಯದ ತಪ್ಪಲಿನಲ್ಲಿ ಮಲಗಿರುವ ಬಯಲು ಪ್ರದೇಶದ ಸುತ್ತಲೂ ಮಂಜು ಹರಡಿ ಎಲ್ಲವನ್ನು ಮಬ್ಬು ಮಾಡುವಂತೆ ಪ್ಲೇಗಿನ ಭಯ ನಾಲ್ಕೂ ಕಡೆ ಆವರಿಸಿ ಬೇರುಬಿಟ್ಟಿತ್ತು. ಆ ನಗರದ ಸಣ್ಣ ಮಗು ಕೂಡ ಪ್ಲೇಗಿನ ಹೆಸರನ್ನು ಕೇಳಿದರೆ ಸಾಕು, ನಡುಗತೊಡಗುತ್ತಿತ್ತು.

ಪ್ಲೇಗು ಭಯಂಕರವಾಗೇನೋ ಇತ್ತು! ಆದರೆ ಕ್ವಾರಂಟೈನ್ ಅದಕ್ಕಿಂತಲೂ ಭೀಕರವಾಗಿತ್ತು. ಜನರಲ್ಲಿ ಕ್ವಾರಂಟೈನ್ ಬಗ್ಗೆ ಇದ್ದಷ್ಟು ಭಯ ಪ್ಲೇಗ್ ಬಗ್ಗೆ ಇರಲಿಲ್ಲ. ಆದ್ದರಿಂದ ನಗರವಾಸಿಗಳ ಆರೋಗ್ಯದ ಬಗ್ಗೆ ಕಾಳಜಿ ಇರುವ ಆರೋಗ್ಯ ಇಲಾಖೆಯು ಇಲಿಗಳ ಸಂಪರ್ಕದಿಂದ ದೂರ ಇರುವಂತೆ ಜನರಿಗೆ ಹೇಳಿತು; ಜೊತೆಗೆ, ‘ಇಲಿ ಇಲ್ಲ ಅಂದ್ರೆ ಪ್ಲೇಗ್ ಇಲ್ಲ’ ಎನ್ನುವ ಬದಲಿಗೆ, ಅದನ್ನೇ ಸ್ವಲ್ಪ ವಿಸ್ತರಿಸಿ, ‘ಇಲಿ ಇಲ್ಲ ಅಂದ್ರೆ ಪ್ಲೇಗ್ ಇಲ್ಲ! ಪ್ಲೇಗ್ ಇಲ್ಲ ಅಂದ್ರೆ ಕ್ವಾರಂಟೈನ್ ಇಲ್ಲ!’ ಎಂಬ ದೊಡ್ಡ ದೊಡ್ಡ ಜಾಹೀರಾತುಗಳನ್ನು ಮುದ್ರಿಸಿ ನಗರದ ಮನೆ ಮನೆಗಳ ಬಾಗಿಲುಗಳ, ಬೀದಿಗಳ ಮತ್ತು ರಸ್ತೆಗಳ ಮೇಲೆ ಅಂಟಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸತೊಡಗಿತು.

ಕ್ವಾರಂಟೈನ್ ಬಗ್ಗೆ ಜನರ ಭಯ ನಿಜವಾದುದೇ ಆಗಿತ್ತು. ಡಾಕ್ಟರಾದ ನನಗೆ ಕ್ವಾರಂಟೈನ್ ಬಗ್ಗೆ ನನ್ನದೇ ಆದ ದೃಢವಾದ ಅಭಿಪ್ರಾಯವಿತ್ತು. ನಗರದಲ್ಲಿ ಕ್ವಾರಂಟೈನ್‌ನಿಂದ ಅನಾಹುತ ಸಂಭವಿಸಿದೆಯೇ ಹೊರತು ಪ್ಲೇಗ್‌ನಿಂದಲ್ಲ ಎಂದು ನಾನು ಪುರಾವೆ ಸಹಿತ ವಾದಿಸುತ್ತಿದ್ದೆ.